
# ಶ್ರೀ ತುಲಸೀ ಅಮೃತಪಾನ
## ಒಂಬತ್ತು ಕಥೆಗಳು

**ಸ್ವಾ**ಮಿ ಶಿವಾತ್ಮಾನಂದರ '**ಶ್ರೀ ತುಲಸೀ ಅಮೃತಪಾನ ಒಂಬತ್ತು ಕಥೆಗಳು**' ಒಂದು ವಿಶಿಷ್ಟ ಸಂಕಲನ, ವಿಶಿಷ್ಟ ಸಾಹಿತ್ಯ ಪ್ರಕಾರವೂ ಹೌದು.

ಮುಖಪುಟದಲ್ಲಿ 'ಒಂಬತ್ತು ಕಥೆಗಳು' ಎಂದು ನಮೂದಿಸಲಾಗಿದ್ದರೂ ಅತಿರಿಕ್ತವಾಗಿ ಕೊನೆಯಲ್ಲಿ ಇನ್ನೆರಡು ವ್ಯಾಖ್ಯಾನಗಳೂ ಸೇರಿ – ಹನ್ನೊಂದು ಕಥೆಗಳು ಎನ್ನಬಹುದಾದಂತಹ ಸಂಕಲನವಿದು. ಇದನ್ನು ಲೇಖಕರು ತಮ್ಮ ದೀಕ್ಷಾಗುರುಗಳಾದ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜೀ ಮಹಾರಾಜರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದ್ದಾರೆ. ಉದಕಮಂಡಲ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದರ ಶುಭಾಶೀರ್ವಚನ ಮುನ್ನುಡಿಯ ಜತೆಜತೆಗೆ ಸಂಕಲನ ಕೊನೆಯಲ್ಲಿ ಸೇರಿಸಿರುವ ಡಾ. ಚಿಂತಾಮಣಿ ಕೊಡ್ಲಕೆರೆಯವರ 'ಪುರಾಣ ಕಥನಗಳು ಆಧುನಿಕ ನೋಟದಲ್ಲಿ' ಎಂಬ ವಿದ್ವತ್ಪೂರ್ಣ ಹಿಂಬರಹ, ಶ್ರೀ ಬಿ.ಜಿ ಜಗದೀಶ ಸಾಗರರವರ ಸಂಕಲನದ ಬಗೆಗಿನ ವಿಚಾರಪೂರ್ಣ ಟಿಪ್ಪಣಿ 'ಮಾನವನಿಗೆ ದೈವದ ನಂಟಿನ ಅನಾವರಣ', ಹಾಗೂ ಇವೆಲ್ಲವುಗಳ ನಡುವೆಯೂ ಅರಳಿ ಬಂದ, ಲೇಖಕರೇ ಬರೆದ, 'ಮಹಾಸಮಷ್ಟಿಭಾವ'ವೆಂಬ ಕಿರುಪ್ರಬಂಧ — ಸಂಕಲನದ ವಾಚನೀಯ ಮೌಲ್ಯವನ್ನು ಇನ್ನಷ್ಟು ವರ್ಧಿಸಿದೆ. ಇಷ್ಟೆಲ್ಲದರ ನಂತರವೂ ಒಂದು ರೀತಿಯ ಸ್ಪಷ್ಟೀಕರಣದ ರೀತಿಯಲ್ಲಿ ಸೇರಿಸಲ್ಪಟ್ಟ ಲೇಖಕರ 'ಅಮೃತತ್ವದೆಡೆಗೆ' ಎನ್ನುವ ಇನ್ನೊಂದು ಕಿರು ಲೇಖನ, ಕಥಾವಸ್ತುಗಳ ಹಿಂದಿನ ಸ್ಫೂರ್ತಿ ಮತ್ತು 'ಅವುಗಳನ್ನು ಕಥೆಯಾಗಲು ತವಕಿಸುವ ಶಕ್ತಿ' ಹೇಗೆ ಈ ಪ್ರಕಟಣೆಯ ಹಿನ್ನೆಲೆಯನ್ನು ಸೃಷ್ಟಿಸಿತು ಎಂಬ ರಹಸ್ಯವನ್ನು ತೆರೆದಿಡುತ್ತದೆ. ''ಸ್ವಾಮಿ ಶಿವಾತ್ಮಾನಂದರು ಬರೆದಿರುವ ಈ ಲೇಖನವನ್ನೋದಿದ ನಂತರವೇ ಓದುಗರು ಕಥೆಗಳನ್ನು ಪ್ರವೇಶಿಸುವುದು ಒಳ್ಳೆಯದು'' ಎಂಬ ಕೊಡ್ಲಕೆರೆಯವರ ಕಿವಿಮಾತು ತುಂಬಾ ಪ್ರಸ್ತುತವಾಗಿದೆ.

ಸಂಕಲನದ ಅಗ್ರಕಥೆ – '**ಶ್ರೀ ತುಲಸೀ**' (ಇದೊಂದು ನೀಳ್ಗತೆ ಕೂಡ ಹೌದು): ''ಕೃಷ್ಣಾನದಿಯ ಕೊಳ್ಳದಲ್ಲಿ ವಿಪುಲವಾಗಿ ಒಣ ತುಲಸೀಬೀಜಗಳನ್ನು ಕಲೆಹಾಕಿದ ನಂತರ, ಈ ತುಲಸೀ ಮಾತೆಯ ಅನುಗ್ರಹಕ್ಕಾಗಿ ಪ್ರಾರ್ಥಿಸಿಕೊಂಡಾಗ, ಶ್ರೀದೇವಿಯೇ ಅನುಗ್ರಹಿಸಿದ ಕಥನವಿದು'' ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಅವರೇ ಬರೆದ ಮುನ್ನುಡಿಯ (ನಮನದ ನುಡಿಗಳು) ''ಇದು ನಾನು ಬರೆದ ಕಥೆಗಳಲ್ಲ, ನಾನು ಸಾಧನ ಮಾತ್ರವಾಗಿರುವೆ'' ಎಂದು ಹೇಳಿಕೊಂಡಿರುವ ವಿನೀತ ನುಡಿಯ ಸಮರ್ಥನೆಯಾಗಿದೆ. ಬ್ರಹ್ಮವೈವರ್ತ ಪುರಾಣ, ಪದ್ಮಪುರಾಣ, ಶಿವಪುರಾಣ ಮೊದಲಾದ ಹಲವು ಪುರಾಣಗಳಲ್ಲಿ ಚೆದುರಿರುವ ಶ್ರೀ ತುಲಸೀ ಕಥಾನಕದ ವಿವಿಧ ತುಣುಕುಗಳೂ ಈ ಕಥನದಲ್ಲಿ ಸೇರಿ, ಒಂದು




*ಕೃತಿ* : **ಶ್ರೀ ತುಲಸೀ ಅಮೃತಪಾನ – ಒಂಬತ್ತು ಕಥೆಗಳು**
*ಲೇಖಕರು* : **ಸ್ವಾಮಿ ಶಿವಾತ್ಮಾನಂದ**
*ಪ್ರಕಾಶಕರು* : **ವಂಶಿ ಪಬ್ಲಿಕೇಷನ್ಸ್, ನಂ.4, ಗಾಯತ್ರಿ ಕಾಂಪ್ಲೆಕ್ಸ್, ಟಿ.ಬಿ. ಬಸ್ ನಿಲ್ದಾಣ ಹತ್ತಿರ, ಬಿ.ಎಚ್.ರಸ್ತೆ, ಸುಭಾಷ್‌ನಗರ, ನೆಲಮಂಗಲ, ಬೆಂಗಳೂರು – 562123 ಫೋನ್: 9916595916**
*ಪುಟಗಳು:* **174** *ಬೆಲೆ* : **150/**

ಕಿರುಗತೆಯಾಗಿ ನಿರೂಪಿಸಲ್ಪಡಬಹುದಾದ ಕಥಾವಸ್ತುವನ್ನು ಬಹುಳವಾಗಿ ಹಿಗ್ಗಿಸಿದೆ. ಇದು ತುಳಸಿಯೊಬ್ಬಳ ಕಥೆಯಲ್ಲ; ತುಳಸಿಯ ಪ್ರಭೇದಗಳಾದ ಕೃಷ್ಣತುಳಸಿ, ರಾಮತುಳಸಿ, ಕಾಡುತುಳಸಿ, ಬಿಲ್ವಶಿವತುಂಬೆಗಳ ಕಿರುಗತೆಗಳು, ಗಂಡಕೀಗರ್ಭದ ಸಾಲಿಗ್ರಾಮದ ಕಥೆ, ಶ್ರೀಕೃಷ್ಣನೊಂದಿಗೆ ರಾಸಮಂಡಲದ ರಾಸೋತ್ಸವದಲ್ಲಿ ಮುಳುಗುವ ರಾಧೆಯ ಕಥೆ, ಗೋಲೋಕ, ಭೂಲೋಕಗಳ ಕಥೆ, ವಿಷ್ಣುವಿನ ಕಥೆ, ವಿರಜಾನದಿಯ ಹುಟ್ಟು–ಹರಿವಿನ ಕಥೆ, ಸುಧಾಮನು ಶಂಖಚೂಡಾಮಣಿಯಾಗಿ ಮತ್ತೆ ಹುಟ್ಟಿದ ಕಥೆ —ಹೀಗೆ ಹಲವು ಚಿಕ್ಕಪುಟ್ಟ ಆದರೆ ರಂಜನೀಯವಾದ ಕಿರುಗತೆ

ಗಳು ಕೂಡಿಕೊಂಡು ಇದೊಂದು 'ನವಪುರಾಣ'ವೇ ಆಗಿದೆಯೆಂಬ ಕೊಡ್ಲೆಕೆರೆಯವರ ಉದ್ಗಾರ ಸಮರ್ಥನೀಯ.

**'ಅಮೃತಪಾನ'** – ಶ್ರೀಶಂಕರರ ಬಾಲ್ಯಕಾಲದ ಕುರಿತು ಉಳಿದು ಬಂದಿರುವ (ಶ್ರೀಶಂಕರರು ದೇವಿಯ ಮೊಲೆಹಾಲು ಕುಡಿದು, ಅದರಿಂದ ತನ್ನ ಅವತರಣಕ್ಕೆ ತಾಯಿಯ ಪೂರ್ಣ ಅನುಗ್ರಹ ಪಡೆದಿದ್ದರು ಎಂಬ) ದಂತಕಥೆಯ ತುಣುಕೊಂದರಿಂದ ಪ್ರೇರಿತವಾದ ಕಥೆ. ಪ್ರಸಿದ್ಧ ಬಾದಾಮಿ–ಪಟ್ಟದಕಲ್ಲು–ಐಹೊಳೆ ಕ್ಷೇತ್ರಗಳ ನಡುವಿನಲ್ಲಿರುವ ಮಹಾಕೋಟೇಶ್ವರ ಕ್ಷೇತ್ರದ ಸ್ಥಳಪುರಾಣದಲ್ಲಿ ದೊರೆತ ದಿವೋದಾಸನ ಕಾಲದ ದೃಷ್ಟಾಂತವೊಂದರಿಂದ ಪ್ರೇರಿತವಾದ ಕಥೆ **'ದತ್ತಗಿರಿಯಲ್ಲಿ'**. ಶ್ರೀರಾಮಕೃಷ್ಣಾಶ್ರಮದ ಪ್ರಕಟಣೆಯಾದ **'ಶ್ರೀ ಚೈತನ್ಯ ಮಹಾಪ್ರಭು'** ಕೃತಿಯನ್ನು ಓದಿದ ಸಂದರ್ಭದಲ್ಲಿ ಪ್ರೇರಿತವಾದ ಕಥೆ **'ಜಯ ಹರಿದಾಸ'**. ಏಳನೇ ಕಥೆಯಾದ **'ಸೇವಾನಾಥ್ ಮಹಾರಾಜ್'** ಅದೇ ಹೆಸರಿನ ಮಹಾಸಾಧಕರೋರ್ವರ ಜೀವನೇತಿಹಾಸದಲ್ಲಿನ ಒಂದು ತುಣುಕಿನ ವಿಸ್ತರಣ. ಶ್ರೀಮತಿ ವಸುಂಧರಾ ದೇಸಾಯಿಯ 'ಉಳಿದ ಹಂಪಿ ಮತ್ತು ಗುರುವಿಷ್ಟಪ್ಪಯ್ಯ' ಕೃತಿ **'ಗೋಪುರ'** ಕಥೆಯ ಹಿಂದಿನ ಪ್ರೇರಣೆ. ವರದಹಳ್ಳಿಯ ಮಹಾಮಹಿಮ ಶ್ರೀ ಶ್ರೀಧರ ಸ್ವಾಮಿಗಳ ಚರಿತ್ರೆಯನ್ನು ಓದಿದ ನಂತರ ಹೊಳೆದುದು **'ಹರಕೆ'** ಕಥೆ.

ಒಂಬತ್ತು ಕಥೆಗಳು ಎಂಬ ಶೀರ್ಷಿಕೆ ಹೊತ್ತ ಈ ಸಂಕಲನದಲ್ಲಿ **'ಕವಚ'** ಮತ್ತು **'ಶ್ರೀರಾಮ ಮುದ್ರಿಕೆಗಳು'** (ಇದು ಈ ಮೊದಲೇ ಪ್ರಕಟಗೊಂಡಿದೆ) ಈ ಎರಡು ಪ್ರವಚನಗಳನ್ನು ಅನುಬೋಧೆಯಾಗಿ ಸೇರಿಸುವುದು ಆಕ್ಷೇಪಾರ್ಹವಲ್ಲದಿದ್ದರೂ, ಅಂತಹ ಅನಿವಾರ್ಯತೆ ಏಕೆ ಉಂಟಾಯಿತು ಎಂಬುದು ಸ್ಪಷ್ಟವಾಗಿಲ್ಲ.

ಮುಗಿಸುವ ಮುನ್ನ ಲೇಖಕರು ಆಹ್ಲಾದಕರ ಪ್ರತಿಮೆಗಳನ್ನು ಸೃಷ್ಟಿಸುವುದಕ್ಕಾಗಿ ಭಾಷೆ–ಪದ–ಉಪಮೆಗಳನ್ನು ಹೇಗೆ ಸಕ್ಷಮವಾಗಿ ದುಡಿಸಿಕೊಳ್ಳುತ್ತಾರೆ ಎಂಬುದಕ್ಕೆ ಒಂದು ಉದಾಹರಣೆ – ಒಂದು ಸಾಮಾನ್ಯವೆನ್ನಿಸಬಹುದಾದ 'ಕಲ್ಲುಕೊಳ್ಳ'ವನ್ನು ವರ್ಣಿಸಿದ ಬಗೆ: *('ಶ್ರೀತುಲಸೀ' ಕಥೆ, ಪು.೧)*

''.... ಒಂದು ದಿನ ಈ ಕಲ್ಲುಕೊಳ್ಳದತ್ತ ಹೋದೆ. ಉತ್ತರ ದಿಕ್ಕಿಗೆ ಇಳಿಮುಖವಾಗಿದ್ದ ಕಲ್ಲುಕೊಳ್ಳದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿದಿರುವ ಕಲ್ಲುಬಂಡೆಯ ಪದರಿನ ಸಾಲುಗಳಿದ್ದವು. ಈ ಕಲ್ಲು ಮಣ್ಣಿನ ಸಂದುಗೊಂದಿನ ಪದರುಗಳಲ್ಲಿ ಮೊಳಕಾಲು ಎತ್ತರಕ್ಕೆ ಬೆಳೆದಿರುವ ಅವರಿಕೆ, ಬಂದರಿಕೆ, ಎಲಚಿ, ಕಾರೆಗಿಡ ಮೊದಲಾದ ಗಿಡಗಂಟಿಗಳು, ಅಲ್ಲಲ್ಲಿ ಮುಳ್ಳುಜಾಲಿಗಿಡಗಳು, ವಿಕಾರದ ರಟಗಳ್ಳಿಯ ಕೊಂಬೆಗಳು, ಎಂಥೆಂಥವೋ ಮುಳ್ಳುಗಿಡಗಳಿದ್ದವು. ಕಲ್ಲುಪದರುಗಳು ಹರಡಿಕೊಂಡಿದ್ದ ಆ ಕಲ್ಲುಭೂಮಿಯಲ್ಲಿ ಒಂದೆಡೆ ಆ ಕಲ್ಲುಸಾಲೇ ಸೋಪಾನದಂತೆ, ಮತ್ತೊಂದೆಡೆ ಅಡ್ಡಗೋಡೆಯಂತೆ, ಇನ್ನೊಂದೆಡೆ ಕೊರಕಲು ಇಳಿಜಾರಿನಂತೆ, ... '' ಇಂತಹ ವರ್ಣನಾ ಸೌಷ್ಠವಗಳು ಓದುಗನ ಮನಸ್ಸನ್ನು ಕ್ಷಣಕಾಲವಾದರೂ ಸೆರೆಹಿಡಿಯದಿರದು.

ಇಲ್ಲಿ ಕಾಣಸಿಗುವ ನಿರೂಪಣಾ ಕೌಶಲ್ಯ, ಭಾಷಾಸಂಪತ್ತು, ವ್ಯಾವಹಾರಿಕತೆಗೆ ಅಧ್ಯಾತ್ಮಿಕ ತಿರುವನ್ನು ಕೊಡುವ ಚಳಕ — ಇವೆಲ್ಲವೂ ಸ್ತುತ್ಯರ್ಹ.

ಇಲ್ಲಿನ ಕಥಾವಸ್ತುಗಳನ್ನು ಯಾವುದೇ ಒಂದು ನಿರ್ದಿಷ್ಟ ಸೂತ್ರಕ್ಕೆ ಕಟ್ಟುಬಿದ್ದು ಉದೇಶಪೂರ್ವಕವಾಗಿ ಆರಿಸಿಲ್ಲ. ಸಾಧಕನೋರ್ವನು ತನ್ನ ಬಾಳಿನ ವಿವಿಧ ಘಟ್ಟಗಳಲ್ಲಿ ಸುಮಾರು ಐದಾರು ವರ್ಷಗಳ ಅವಧಿಯಲ್ಲಿ, ಹಠಾತ್ತಾಗಿ, ಮುಖಾಮುಖಿಯಾಗಿ, ಚರ್ಮಚಕ್ಷುಗಳ ಸಂಪರ್ಕಕ್ಕೆ ಬಂದ ವಿವಿಧ ನೈಸರ್ಗಿಕ, ಚಾರಿತ್ರಿಕ, ಪೌರಾಣಿಕ, ಸ್ಥಾವರ–ಜಂಗಮ ವಸ್ತುವಿಶೇಷಗಳನ್ನು ಅಪ್ರಯತ್ನವಾಗಿ ತನ್ನ ಮೂರನೆಯ ಒಳಗಣ್ಣಿನಿಂದ ಅವಲೋಕಿಸಿ, ಅವುಗಳಿಗೆ ತನ್ನದೇ ಆದ ಒಂದು ಸುಂದರ ಚೌಕಟ್ಟನ್ನು ನಿರ್ಮಿಸಿ, ವಿಶಾಲವಾದ ಮನೋಭಿತ್ತಿಯಲ್ಲಿ ತೂಗುಹಾಕಿದಂತಿದೆ, ಈ ಸಂಕಲನ.

ಈ ಮತ್ತು ಇತರ ಕಾರಣಗಳಿಗಾಗಿ, ಒಮ್ಮೆಲೇ ಓದಿ ಸಂಗ್ರಹಕ್ಕೆ ಸೇರಿಸುವ ಕೃತಿ ಇದಾಗಿರದೆ, ಸ್ವಲ್ಪ ಸ್ವಲ್ಪವಾಗಿಯೇ, ಹಲವೊಮ್ಮೆ ಮರಳಿ ಮರಳಿ ಓದಿದಾಗ, ಕಬ್ಬಿನ ಜಲ್ಲೆಯನ್ನು ನಿಧಾನವಾಗಿ ಜಗಿದಾಗ ಸಿಗುವ ರಸಸ್ವಾದನೆಯ ಹರ್ಷ, ಸಂತೃಪ್ತಿಗಳ ಅನುಭವ ಕೆಲವರಿಗಾದರೂ ಸಿಗದಿರದು.

*— ವಿಜಯನಾಥ ಭಟ್*


**ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಶಿಬಿರ)**

**2018 ಜುಲೈ 4 ರಿಂದ 8ರ ವರೆಗೆ ; *ಮಾಧ್ಯಮ:* ಕನ್ನಡ ಮತ್ತು ಇಂಗ್ಲಿಷ್**

**ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ: ರೂ. 2,500/– ಮಾತ್ರ**

*ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. *140 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. *ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಭಾಗವಹಿಸದಿದ್ದಲ್ಲಿ ಅವರ ಪ್ರತಿನಿಧಿಯಾಗಿ ಬೇರೆಯವರಿಗೆ ಅವಕಾಶವಿರುವುದಿಲ್ಲ. *ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಭಾಗವಹಿಸದಿದ್ದಲ್ಲಿ ರೂ. 2000/– ಅನ್ನು ಮಾತ್ರ ಹಿಂದಿರುಗಿಸಲಾಗುವುದು. *ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cm x 23cm) ಲಕೋಟೆಗೆ ರೂ.5/– ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. *ಅರ್ಜಿಫಾರಂಗಳನ್ನು www.rimse.org.in ವೆಬ್‌ಸೈಟಿನಿಂದಲೂ ಡೌನ್‌ಲೋಡ್ ಮಾಡಿ, ಭರ್ತಿಮಾಡಿ, ಸ್ಕ್ಯಾನ್ ಮಾಡಿ ಕಳುಹಿಸಬಹುದು. *ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜೂನ್ 15, 2018.

ವಿಳಾಸ: Ramakrishna Institute of Moral and Spiritual Education, Yadavagiri, Mysore-570020
Phone:0821-2417666 ; E-mail: mysuru.rimse@rkmm.org; Website: www.rimse.org.in